ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 98-104
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬಿ.ಪುಟ್ಟಸ್ವಾಮಿಯವರ ಅಕ್ಕಮಹಾದೇವಿ ನಾಟಕದ ಆಯ್ದ ವಚನಗಳಲ್ಲಿ ರಾಷ್ಟ್ರೀಯ ಹಿತದ ವಿಶ್ಲೇಷಣಾತ್ಮಕ ನೋಟ

**ಭವಾನಿ ಎಸ್[1] ಮತ್ತು ಡಾ. ನಂದೀಶ ಎಂ. ಎನ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಮಾರ್ಗದರ್ಶಕರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

***Abstract:***
*12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಧಾರ್ಮಿಕ ಸಾಮಾಜಿಕ ಚಳುವಳಿಯನ್ನು ವಚನಕ್ರಾಂತಿ ಎಂದು ಗುರುತಿಸಲಾಗಿದೆ. ಈ ಕ್ರಾಂತಿಯ ನೇತೃತ್ವ ವಹಿಸಿದವರು ಬಸವಣ್ಣ ಎಂಬುದು ನಮಗೆ ತಿಳಿದಿದೆ. ಇದರಲ್ಲಿ ಅಕ್ಕಮಹಾದೇವಿಯನ್ನು ಪ್ರಮುಖ ವಚನಕಾರ್ತಿಯಾಗಿ ಗುರುತಿಸುತ್ತೇವೆ ಹಾಗೂ ಆಕೆಯನ್ನು ಕನ್ನಡದ ಮೊದಲ ಕವಯತ್ರಿ ಎಂದು ಕರೆಯುತ್ತೇವೆ. ಆಕೆಯು ಶಿವನನ್ನು ತನ್ನ ಪತಿಯೆಂದು ಭಾವಿಸಿಕೊಂಡು ಉಜ್ವಲ ಆಧ್ಯಾತ್ಮಿಕತೆಯನ್ನು ಸಾಧಿಸಲು ಸಾಮಾಜಿಕ ವ್ಯವಸ್ಥೆ ಮತ್ತು ರಾಜ ಪ್ರಭುತ್ವಗಳೆರಡನ್ನು ಧಿಕ್ಕರಿಸಿ ಹೊರಟವಳು. ಮಲ್ಲಿಕಾರ್ಜುನನ ಬಗ್ಗೆ ಅಪಾರ ಭಕ್ತಿಯುಳ್ಳ ಈಕೆ ಲೌಕಿಕ ಜೀವನ ತ್ಯಜಿಸಿ ಕಲ್ಯಾಣಕ್ಕೆ ಪ್ರಯಾಣ ಬೆಳೆಸಿದಳು; ಅಲ್ಲಿ ಅನುಭವ ಮಂಟಪದಲ್ಲಿ ಅಲ್ಲಮಪ್ರಭುಗಳ ಮಾರ್ಗದರ್ಶನದ ಮೂಲಕ ವಚನಗಳನ್ನು ರಚಿಸಿದಳು. ಆದರೆ ಪ್ರತಿಯೊಂದು ಸಾಹಿತ್ಯದ ಜೀವಂತಿಕೆಯನ್ನು ಗುರುತಿಸುವುದು ಅದು ಕಾಲದಿಂದ ಕಾಲಕ್ಕೆ ಉರುಳಿದಾಗ ಪ್ರಸ್ತುತವಾಗುತ್ತದೆಯೇ ಎಂಬುದರ ಆಧಾರದ ಮೇಲಲ್ಲವೇ? ಹಾಗಾಗಿ ಪ್ರಸ್ತುತ ಲೇಖನದಲ್ಲಿ ಅಕ್ಕಮಹಾದೇವಿಯವರ ಆಯ್ದ ವಚನಗಳನ್ನು ರಾಷ್ಟ್ರೀಯತೆಯ ಅಥವಾ ರಾಷ್ಟ್ರದ ಹಿತದ ಹಿನ್ನೆಲೆಯಲ್ಲಿ ಚರ್ಚಿಸಲು ಮುಂದಾಗಿದ್ದೇನೆ.*

**Keywords:** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಅಕ್ಕಮಹಾದೇವಿ, ಆಯ್ದ ವಚನಗಳು*

## ಪೀಠಿಕೆ

ಅಕ್ಕಮಹಾದೇವಿಯವರ ವಚನಗಳನ್ನು ಕುರಿತು ಚೆನ್ನಬಸವಣ್ಣನು “ಆದ್ಯರ ಅರವತ್ತು ವಚನಕ್ಕೆ ಬಸವನ ಇಪ್ಪತ್ತು ವಚನ ಬಸವನ ಇಪ್ಪತ್ತು ವಚನಕ್ಕೆ ಅಲ್ಲಮನ ಹತ್ತು ವಚನ ಅಲ್ಲಮನ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ ಅಜಗಣ್ಣನ ಐದು ವಚನಕ್ಕೆ ಅಕ್ಕಮಹಾದೇವಿ ಒಂದು ವಚನ”[1] ಅಕ್ಕಮಹಾದೇವಿಯವರ ವಚನಗಳು ಭಕ್ತಿ ವೈರಾಗ್ಯ ಹಾಗೂ ಆತ್ಮ ಸಾಕ್ಷಾತ್ಕಾರವನ್ನು ಕುರಿತು ಜ್ಞಾನವನ್ನು ಪಸರಿಸುತ್ತವೆ. ಇದಲ್ಲದೆ ಸ್ತ್ರೀ ಸಮಾನತೆಯ ಬಗ್ಗೆ ಅಕ್ಕಮಹಾದೇವಿಯವರ ಅಚಲ ನಿಲುವುಗಳನ್ನು ಅವರ ವಚನಗಳಲ್ಲಿ ಕಾಣುತ್ತೇವೆ. ಅವಳ ವಚನಗಳು ವಾಙ್ಮಮ ಮಂದಿರಕ್ಕೆ ಕಟ್ಟಿದ ಹಸಿರು ತೋರಣದಂತಿವೆ. ತೀ.ನಂ. ಶ್ರೀಕಂಠಯ್ಯನವರು ಹೇಳುವಂತೆ “ಅವಳ ವಚನಗಳ ಬಹುಭಾಗ

***Please cite this article as:*** ಭವಾನಿ ಎಸ್ ಮತ್ತು ನಂದೀಶ ಎಂ.ಎನ್. (2025). ಬಿ.ಪುಟ್ಟಸ್ವಾಮಿಯವರ ಅಕ್ಕಮಹಾದೇವಿ ನಾಟಕದ ಆಯ್ದ ವಚನಗಳಲ್ಲಿ ರಾಷ್ಟ್ರೀಯ ಹಿತದ ವಿಶ್ಲೇಷಣಾತ್ಮಕ ನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(5), 98–104

ನಿಜವಾಗಿಯು ರಸಾರ್ದ್ರವಾದದ್ದು; ಉಪಮಾನಗಳಿಂದ ಚಿತ್ರಕಲ್ಪನೆಗಳಿಂದ ಮನೋಹರವಾಗಿರತಕ್ಕದ್ದು; ಅವಳದ್ದು ಕವಿ ಹೃದಯ, ಕವಿಯ ಕಣ್ಣು ಎಂಬುದನ್ನು ಸಾರತಕ್ಕದ್ದು."[2]

ಇಲ್ಲಿಯವರೆಗೂ ನಾವು ವಚನ ಸಾಹಿತ್ಯದಲ್ಲಿ ಶರಣ ತತ್ವದ ಪರಿಕಲ್ಪನೆಯನ್ನೇ ಪ್ರಮುಖವಾಗಿ ಗುರುತಿಸಿದ್ದೇವೆ. ಶರಣ ತತ್ವದ ಪ್ರಮುಖ ಅಂಶಗಳಾದ ಸಮಾನತೆ, ಅಸ್ಪೃಶ್ಯತಾ ನಿವಾರಣೆ, ಭಕ್ತಿ, ಸ್ತ್ರೀ ಸ್ವಾತಂತ್ರ್ಯ ಮುಂತಾದ ಅಂಶಗಳು ರಾಷ್ಟ್ರೀಯತೆಯ ಒಳಗೆ ಉದುಗಿರುವ ಅಂಶಗಳೇ ಆಗಿರುವುದರಿಂದ ಹಾಗೂ ಬಿ.ಪುಟ್ಟಸ್ವಾಮಿಯವರ ಅಕ್ಕಮಹಾದೇವಿ ನಾಟಕದ ರಚನಾ ಕಾಲವು ಸಹ ವಸಹಾತುಶಾಹಿ ಕಾಲಘಟ್ಟದಾಗಿರುವುದರಿಂದ ಆ ನಾಟಕದ ಆಯ್ದ ವಚನಗಳಲ್ಲಿ ಒಂದು ಹೊಸ ಪರಿಕಲ್ಪನೆಯನ್ನು ನೋಡಲು ಮುಂದಾಗಿದ್ದೇನೆ. ಈ ನೆಲೆಯಲ್ಲಿ ಆಯ್ದುಕೊಂಡ ಮೊದಲ ವಚನ

ಸಂಸಾರ ಬೆಂಬಿಡದೆ ಕಾಡುತಿದೆಯನ್ನ

***"ತರಣಿ ಹುಳು ತನ್ನ ಸ್ನೇಹದಲ್ಲಿ ಮನೆ ಮಾಡಿ***
***ತನ್ನ ನೂಲು ತನ್ನ ಸುತ್ತಿ ಸಾವ ತೆರೆನಂತೆ***
***ಮನಬಂದುದ ಬಯಸಿ ಬೇಯುತ್ತಿದ್ದೇನೆ***
***ಎನ್ನ ಮನದ ದುರಾಸೆಯ ಮಾಣಿಸಿ***
***ನಿಮ್ಮತ್ತಾ ತೋರ ಮಲ್ಲಿಕಾರ್ಜುನ"*** [3]

ಸಂ–ಸಾರ ಇದೊಂದು ಕರ್ಮ ಭೂಮಿ, ಸಂಸಾರವು ದೇವರನ್ನು ತಿಳಿಯುವ ಮಾರ್ಗ. ಸಂಸಾರವು ಸುಖ, ದುಃಖ, ಪ್ರೀತಿ, ವಿಶ್ವಾಸ, ಸಹನೆಯಿಂದ ಕೂಡಿದ ಆಗರ. ಸಂಸಾರದಲ್ಲಿ ದೇವರ ಭಕ್ತಿ ಇರಬೇಕು ಆದರೆ ಅದು ಭವಬಂಧನವಾಗತೊಡಗಿದರೆ? ಸಂಸಾರದಲ್ಲಿ ದಾಂಪತ್ಯವೆಂಬುದು ನಾವೆ. ಆದರೆ ಆ ನಾವೆಯು ಸಂಸಾರವೆಂಬ ಸಮುದ್ರವನ್ನು ದಾಟಿಸುವ ನಾವೆಯಾಗಿಲ್ಲದಿದ್ದರೇ? ಗುರಿ ತಲುಪಿಸುವ ಇರಾದೆ ಅದಕ್ಕಿಲ್ಲವಾದರೆ? ಹಾಗಾಗಿ ಖಂಡಿತವಾಗಿಯೂ ಸಂಸಾರವೆಂಬುದು ವ್ಯಕ್ತಿಯನ್ನು ಹಾಗೂ ಸಮಾಜವನ್ನು ಹಾದಿ ತಪ್ಪಿಸುವುದು ಸಹಜ. ಅಕ್ಕಮಹಾದೇವಿಯ ಭಕ್ತಿ ಮಾರ್ಗಕ್ಕೆ ಅಡ್ಡಲಾಗಿದ್ದು ಆಕೆಯ ಸಂಸಾರ. ಅದನ್ನು ಆಕೆಯು ತರಣಿ ಹುಳುವಿನ ಉದಾಹರಣೆಯನ್ನು ನೀಡಿ ತಿಳಿಸುತ್ತಿದ್ದಾಳೆ.

ಸ್ವಾರ್ಥ, ದುರಾಸೆ, ಮೋಹ, ದುರಾಸೆಯಿಂದ ತುಂಬಿಕೊಂಡ ಮಂದಿಯು ಬ್ರಿಟಿಷರೆಂಬುವವರನ್ನು ನಂಬಿ ಸ್ನೇಹದ ಹಸ್ತವನ್ನು ಚಾಚಿ ತಮ್ಮ ನಿರ್ಗತಿಗೆ ದುರ್ಗತಿಗೆ ದಾಸ್ಯಕ್ಕೆ ಕಾರಣರಾದರು. ಇನ್ನೂ ಕೆಲವು ಮಂದಿ ಸಂಸಾರವೆಂಬ ಮೋಹದಲ್ಲಿ ಬಿದ್ದು ಬ್ರಿಟಿಷರಿಗೆ ಸಹಾಯ ಮಾಡಿದರು ಹಾಗೆಯೇ ಸಂಸಾರವೆಂಬ ಭವಸಾಗರಕ್ಕೆ ಎದುರಿ ಪರಕೀಯರನ್ನು ವಿರೋಧಿಸದೆ ಉಳಿದವರು ಹಲವು ಮಂದಿ. ಪರಕೀಯರು ನೀಡಿದ ಸೌಲಭ್ಯಗಳು, ಹಣದ ಆಸೆಗಾಗಿ ಅನೇಕ ವೀರರ ಅವಸಾನಕ್ಕೆ ಕಾರಣವಾದವರು ಇನ್ನೆಷ್ಟೋ ಮಂದಿ. ಇಲ್ಲಿ ಅಕ್ಕಮಹಾದೇವಿಯು ಮಲ್ಲಿಕಾರ್ಜುನನೆಂಬ ಗುರಿ ಸೇರಲು ಅವಳನ್ನು ಭವಬಂಧನಗಳಿಂದ ಮುಕ್ತಿ ಮಾಡಿಕೊಳ್ಳುವ ರೀತಿಯು ಅಂದಿನ ಮಂದಿಗೆ ಬೇಕಾಗಿದ್ದ ಒಳ್ಳೆಯ ಮಾರ್ಗವದು. ಮನಸ್ಸಿನ ನಿಗ್ರಹ ರಾಷ್ಟ್ರೀಯತೆಯ ಪ್ರತಿಪಾದನೆಯಲ್ಲಿ ತುಂಬಾ ಪ್ರಮುಖವಾದ ವಿಷಯವಾಗಿದೆ. ಸಂಸಾರದ ಭವಬಂಧನದಿಂದ ಮುಕ್ತಿ ಪಡೆದ ಅನೇಕ ಮಂದಿ ದೇಶಭಕ್ತರಿಂದಲೇ ನಾವಿಂದು ಸ್ವಾತಂತ್ರದ ಜ್ಯೋತಿಯಲ್ಲಿ ಪ್ರಜ್ವಲಿಸುತ್ತಿದ್ದೇವೆ. ಇದನ್ನು ನೋಡಿದರೆ ಈ ವಚನ ಎಷ್ಟು ಪ್ರಸ್ತುತವಾದುದು ಅಂದಿನ ಸ್ವಾತಂತ್ರ್ಯ ಹೋರಾಟಗಾರರು ತನ್ನ ಸಂಸಾರ ಹೆಂಡತಿ ಮಕ್ಕಳು ಆಸ್ತಿ ಎಂಬ ಮೋಹಕ್ಕೆ ಬಲಿಯಾಗಿದ್ದರೆ ಏನು ಮಾಡಬೇಕಾಗಿತ್ತು. ಮಲ್ಲಿಕಾರ್ಜುನ ಅರ್ಥಾತ್ ಸ್ವಾತಂತ್ರ್ಯವು ದೊರಕುತ್ತಿತ್ತೆ? ಅಕ್ಕಮಹಾದೇವಿಯು ಮಲ್ಲಿಕಾರ್ಜುನನ ಮೇಲಿದ್ದ ಭಕ್ತಿಯಿಂದ ಅವನಲ್ಲಿ ಲೀನಾಳಾಗಿ ಮುಕ್ತಿ ಕಂಡಳು. ಹಾಗೆಯೇ

ರಾಷ್ಟ್ರಭಕ್ತಿಯಿಂದ ಸ್ವಾತಂತ್ರ್ಯ ಸೂರ್ಯನು ಭಾರತೀಯರ ಬಾಳಿನಲ್ಲಿ ಬೆಳಗಿದನು.

***"ಗಿರಿಯಲ್ಲದೆ ಹುಲ್ಲು ಮೊರೆಯಲ್ಲಾಡುವುದೇ ನವಿಲು***
***ಕೊಳನಲ್ಲದೆ ಕಿರುವಳ್ಳಕ್ಕೆಸುವುದೇ ಹಂಸೆ***
***ಮಾಮರ ತಳಿತಲ್ಲದೆ ಸ್ವರಗೈಯುವುದೇ ಕೋಗಿಲೆ***
***ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ***
***ಎನ್ನದೈವ ಚೆನ್ನಮಲ್ಲಿಕಾರ್ಜುನನಲ್ಲದೆ***
***ಅನ್ಯಕ್ಕೆಳಸುವುದೇ ಎನ್ನ ಮನ"*** [4]

ಇಲ್ಲಿ ಮಲ್ಲಿಕಾರ್ಜುನನೆಂದರೆ ಸ್ವಾತಂತ್ರ್ಯ, ದಯೆ, ಕರುಣೆ, ವೈಜ್ಞಾನಿಕತೆ ಎಂದು ಗುರುತಿಸಬಹುದು. ಸಣ್ಣ ಜೀವಿಯಿಂದ ಹಿಡಿದು ಹುಲು ಮಾನವನವರೆಗೂ ಸ್ವಾತಂತ್ರ್ಯವೆಂಬುದು ಬಹು ಮುಖ್ಯವಾದುದು. ಮಾನವನು ಬದುಕಲು ಅನ್ನ ಪಾನದಿಗಳು ಹೇಗೆ ಮುಖ್ಯವೋ ಹಾಗೆಯೇ ಸ್ವಾತಂತ್ರ್ಯವೂ ಸಹ ಮೂಲಭೂತ ವಸ್ತುವಾಗಿದೆ. ಆಯಾ – ಆಯಾ ಜೀವಿಗೆ ಅದರದೇ ನೆಲೆಯಲ್ಲಿ ಸ್ವಾತಂತ್ರ್ಯವು ಅಗತ್ಯವಾಗಿರುತ್ತದೆ. ನಮ್ಮ ನೆಲದ ನಮ್ಮ ಜನರೇ ನಮ್ಮನ್ನು ಆಳ್ವಿಕೆ ಮಾಡದೆ ಪರಕೀಯರಿಂದ ಆಳ್ವಿಕೆಯನ್ನು ಮಾಡಿಸಿಕೊಂಡರೆ ಸರಿಯಾಗುತ್ತದೆಯೇ? ಅದರಿಂದ ನಮಗೆ ಪೂರ್ಣ ಪ್ರಮಾಣದ ಸ್ವಾತಂತ್ರ್ಯವೂ ದೊರಕುವುದಿಲ್ಲ. ನಮ್ಮ ಧರ್ಮ ಸಂಸ್ಕೃತಿಯ ಪಾಲನೆಯಲ್ಲಿ ನಾವು ಸಾಗಬೇಕಾಗಿರುವುದು ಬಹು ಮುಖ್ಯವಾದದು. ಅದರಲ್ಲಿ ಯಾವುದು ಸರಿ; ಯಾವುದು ತಪ್ಪು ಎಂಬುದನ್ನು ಕಾಲಕಾಲಕ್ಕೆ ಓರೆಹಚ್ಚಬೇಕು. ಧರ್ಮವು ಜ್ಞಾನದ ಬೆಳಕಾಗಬೇಕು ಅದು ಜ್ಯೋತಿಯಂತೆ ನಮ್ಮನ್ನು ಬೆಳಗಬೇಕೆ ಹೊರತು ಮೂಢನಂಬಿಕೆ, ಅರ್ಥವಿಲ್ಲದ ಆಚರಣೆಗಳು, ಸಂಪ್ರದಾಯಗಳು, ಪದ್ಧತಿಗಳು ಮುಂತಾದವುಗಳ ಮೂಲಕ ಮಾನವನನ್ನು ಕಷ್ಟಕ್ಕೆ ದೂಡಬಾರದು.

ಧರ್ಮದಲ್ಲಿ ಸಾರವಿಲ್ಲದಿದ್ದರೆ ಅದರಿಂದ ಏನು ಒಳಿತಾಗಬಹುದು. ಮಾನವೀಯತೆ ಸಮಾನತೆ, ಭ್ರಾತೃತ್ವ, ಐಕ್ಯತೆ, ಕರುಣೆ, ಪ್ರೀತಿ, ಸಹಿಷ್ಣುತೆ, ಸಹನೆ ಮುಂತಾದ ಮೌಲ್ಯಗಳನ್ನು ಬೋಧಿಸದಿದ್ದ ಮೇಲೆ ಅದರಿಂದ ನಮಗಾಗುವ ಲಾಭವೇನು ಇಲ್ಲ. ಹಾಗೆಯೇ ಸ್ವಾಭಿಮಾನ ಸ್ವಾತಂತ್ರ್ಯದಿಂದ ಕೂಡಿರದೆ; ಪರಾತಂತ್ರ್ಯ ದಾಸ್ಯದಿಂದ ಕೂಡಿದ ಬದುಕಿಗೆ ಅರ್ಥವೇನು ಇರುವುದಿಲ್ಲ. ಸ್ವಾತಂತ್ರ್ಯವು ರಾಷ್ಟ್ರೀಯತೆಯ ಒಂದು ಅಂಶವಾಗಿರುವಂತೆ ಧರ್ಮದ ಸರಿಯಾದ ಆಚರಣೆಯು ಸಹ ರಾಷ್ಟ್ರೀಯತೆಯ ಒಂದು ಭಾಗವಾಗುತ್ತದೆ. ರಾಷ್ಟ್ರೀಯತೆ ಎಂದರೆ ಬರೀ ಪರಕೀಯರ ವಿರುದ್ಧ ಹೋರಾಡುವುದೇ ಅಲ್ಲದೆ ನಮ್ಮದೇ ಆಚರಣೆ ಸಂಪ್ರದಾಯ ಹಾಗೂ ಅವುಗಳಲ್ಲಿ ತುಂಬಿಕೊಂಡಿರುವ ಅಂಧಕಾರವನ್ನು ಅಥವಾ ಕೆಟ್ಟದ್ದನ್ನು ತೊಡೆದು ಹಾಕಿ ದೇಶವನ್ನು ದೇಶವಾಸಿಗಳನ್ನು ಮುನ್ನಡೆಸುವುದು ಎನಿಸುತ್ತದೆ.

***"ತನು ನಿಮ್ಮ ರೂಪಾದ ಬಳಿಕ ನಾನಾರ ನೋಡುವೆ***
***ತನು ನಿಮ್ಮ ರೂಪಾದ ಬಳಿಕ ನಾನಾರ ನೆನೆವೆ***
***ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ***
***ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನರಿವೆ ಚೆನ್ನಮಲ್ಲಿಕಾರ್ಜುನ"***[5]

ದೇಶಭಕ್ತಿ ಎಂದರೇನು? ಎಂಬ ಪ್ರಶ್ನೆಯು ಮೂಡಿದಾಗ ಒಬ್ಬ ವ್ಯಕ್ತಿ ತನುವಿನ ಅನುರಣುವಿನಲ್ಲೂ ನನ್ನ ದೇಶ, ನನ್ನ ಭಾಷೆ, ನನ್ನ ಜನ ಎಂದು ಭಾವಿಸಿದಾಗ ಅವರ ನೆಮ್ಮದಿಯನ್ನು ನೋಡದೆ ಮತ್ತೇನನ್ನು ನೋಡಲು ಬಯಸುತ್ತಾನೆ. ಕಣಕಣದಲ್ಲಿಯೂ ತಾಯಿ ನೆಲದ ಪ್ರೀತಿಯು ಸ್ಫುರಿಸಿದಾಗ ಭಾರತಾಂಬೆಯ ನೆನೆಯದೆ ಇನ್ನಾರನ್ನು ನೆನೆಯಲು ಸಾಧ್ಯ. ಭಾರತಾಂಬೆಗಾಗಿ ತನು–ಮನವನ್ನರ್ಪಿಸಿದವನು ಆಕೆಯ ಸ್ವಾತಂತ್ರ್ಯವನ್ನ ಆರಾಧಿಸುತ್ತಾನೆ. ನಾವು, ನಮ್ಮವರು, ನಮ್ಮತನ, ನಮ್ಮ ಧರ್ಮ, ನಮ್ಮ ಸಂಸ್ಕೃತಿ, ನಮ್ಮ ಜಲ ಎಂಬ ಅರಿವು ಮೂಡಿದಾಗತಾನೆ ಮಲ್ಲಿಕಾರ್ಜುನ ನೆಮ್ಮದಿಯ ಸನ್ನಿಧಿಯೂ ದೊರಕುತ್ತದೆ. ಸ್ವಾತಂತ್ರ್ಯದಿಂದ

ಕೂಡಿರುವ ಬದುಕು ನಮ್ಮದಾಗುತ್ತದೆ. ಮಲ್ಲಿಕಾರ್ಜುನನೆಂಬ ಅರಿವು ಮೂಡಿದ್ದರಿಂದ ದೇಶಕ್ಕಾಗಿ ತನು ಮನ ಪ್ರಾಣವನ್ನು ಅರ್ಪಿಸಿದ ಹಲವು ಮಂದಿ ಜ್ಞಾನಿಗಳು ಹೋರಾಟಗಾರರು ದೇಶಭಕ್ತರಿಂದ ತಾನೇ ನಮಗೆ ಸ್ವಾತಂತ್ರ್ಯವು ದೊರಕಿತು.

***"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಾಂಗನೊಲಿದೆ***

***ಎಲೆಯ ಎಡೆ ಇಲ್ಲದ ಕಡೆಯಿಲ್ಲದ ತೆರೆಯಿಲ್ಲದ***

***ಕುರಿಯಿಲ್ಲದ ಭಯವಿಲ್ಲದ ನಿರ್ಭಯ ಚೆಲುವಾಂಗನೊಲಿದೆ ನಾನು***

***ಕುಲಸೀಮೆ ಇಲ್ಲದ ನಿಸ್ಸೀಮ ಚೆಲುವಾಂಗನೊಲಿದೆ***

***ಇದು ಕಾರಣ ಚೆನ್ನಮಲ್ಲಿಕಾರ್ಜುನನೆ ಚೆಲುವ ಗಂಡನಿಗೆ***

***ಈ ಸಾವ ಕೆಡುವರನೂಯ್ದು ಒಲೆಯೊಳಗಿಕ್ಕು"***[6]

ವ್ಯಕ್ತಿ ಸ್ವಾತಂತ್ರ್ಯವು ನಿರಂತರವಾದುದಾಗಿರಬೇಕು. ಅದಕ್ಕೆ ದಕ್ಕೆ ಉಂಟಾದರೆ ಅದರ ಮೌಲ್ಯವು ಕಳಚುವುದು. ರಾಜರಿಂದ ಪರಕೀಯರಿಂದ ಪಾಳೆಗಾರಿಕೆಯಿಂದ ಜಮೀನ್ದಾರರಿಂದ ಮುಂತಾದ ವ್ಯವಸ್ಥೆಯ ಆಳ್ವಿಕೆಯಿಂದ ಹಂತ ಹಂತವಾಗಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗಿ ಸಾವಿಗೀಡಾಗುತ್ತಲೆ ಸಾಗಿರುವುದನ್ನು ನಾವು ಗಮನಿಸಬಹುದು. ಆದರೆ ವ್ಯಕ್ತಿ ಸ್ವಾತಂತ್ರ್ಯವೆಂಬುದು ಸಾವಿಲ್ಲದಿರುವುದಾಗಿರಬೇಕು. ಆದರೆ ಅದು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವಂತೆ ಇರಬಾರದು ಮತ್ತು ಮತ್ತೊಬ್ಬರಿಗೆ ಹಾನಿ ಉಂಟುಮಾಡಬಾರದು. ವ್ಯಕ್ತಿ ಸ್ವಾತಂತ್ರ್ಯವೂ ಕೇಡುಕನ್ನು ಹೊರತುಪಡಿಸಿದಾಗ ಅದಕ್ಕೆ ನೀತಿ ನಿಯಮಗಳ ರೂಪರೇಖೆಗಳ ಅಗತ್ಯವಿರುವುದಿಲ್ಲ. ನೀನು ಇಷ್ಟೇ ಸ್ವಾತಂತ್ರ್ಯದಿಂದಿರಬೇಕು. ಇಷ್ಟೇ ಮಿತಿಯೊಳಗೆ ಸ್ವಾತಂತ್ರ್ಯವನ್ನು ಅನುಭವಿಸಬೇಕು ಎಂಬ ಚೌಕಟ್ಟು ಹಾಕುವ ಅವಶ್ಯಕತೆ ಇರುವುದಿಲ್ಲ.

ಯಾವುದೇ ಪ್ರಜೆಯು ಸರಿಯಾದ ದಾರಿಯಲ್ಲಿ ನಡೆಯುವ ಗುರಿ ಹೊಂದಿ ಸ್ವಾತಂತ್ರ್ಯದ ಹೆಜ್ಜೆಯನ್ನು ಇಟ್ಟಾಗ ಆತನಿಗೆ ಯಾವುದೇ ಭಯದ ನೆರಳು ಸುಳಿಯಬಾರದು. ಸಮಾನತೆ ಎಂಬುದು ಪ್ರತಿಯೊಬ್ಬ ನಾಗರಿಕನ ಹಕ್ಕಾಗಿರುತ್ತದೆ ಆತನಿಗೆ ಕುಲ ಸೀಮೆಯ ಗೆರೆಯನ್ನು ಹಾಕಬಾರದು. ಕುಲ ಸೀಮೆಯ ಕಾರಣವನ್ನು ಇಟ್ಟುಕೊಂಡು ಆತನನ್ನು ಶೋಷಿಸಲು ಬಾರದು. ಜಗತ್ತಿನಲ್ಲಿ ಉಳಿಯುವುದು ಪ್ರಜಾಪ್ರಭುತ್ವದ ಮಾದರಿಯೇ ಹೊರತು ಜನತೆಯನ್ನು ಶೋಷಿಸುವ ಅವೈಜ್ಞಾನಿಕ ದಬ್ಬಾಳಿಕ ದೌರ್ಜನ್ಯದಿಂದ ಕೂಡಿದ ಯಾವುದೇ ಪ್ರಭುತ್ವಕ್ಕಾದರೂ ಕೊನೆಯಂಬುದು ನಿಶ್ಚಿತ. ಇಂತಹ ಯಾವುದೇ ವ್ಯವಸ್ಥೆಯನ್ನು ಕಾಲಪುರುಷ ಎಂದರೆ ಮಲ್ಲಿಕಾರ್ಜುನ ಸುಟ್ಟು ಬೂದಿ ಮಾಡಬೇಕು ಎಂದು ಅಪೇಕ್ಷಿಸುತ್ತಾನೆ ಎಂದು ಅರ್ಥೈಸಬಹುದಾಗಿದೆ.

***"ಚಂದನವ ತಂದು ಕೊರೆದು ತೊಂದರೆ ನೊಂದೆನೆಂದು ಕಂಪ ಬಿಟ್ಟಿತ್ತೆ***

***ತಂದು ಸುವರ್ಣನಾ ಕಡಿದರೆ ಬೆಂದು ಕಳಂಕ ಹಿಡಿದಿತ್ತೆ***

***ಸಂದು ಸಂದು ಕಡಿದು ಕಬ್ಬನ ತಂದು ಗಾಣದಲ್ಲಿಕ್ಕೆ***

***ಬಂದ ಪಾಕಗಳು ಸಕ್ಕರೆಯಾಗಿ ನೊಂದನೆಂದು ಸವಿಯ ಬಿಟ್ಟಿತ್ತೇ***

***ನಾ ಹಿಂದೆ ಮಾಡಿದ ಹೀನಗಳಲ್ಲೆಲ್ಲವಾ ತಂದು ಮುಂದಿಳುಹಲು***

***ನಿಮಗೆ ಹಾನಿಯೇ ಎನ್ನ ದೇವರ ದೇವ ಚೆನ್ನಮಲ್ಲಿಕಾರ್ಜುನ"*** [7]

ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಇಂಗ್ಲಿಷರು ದೇಶಪ್ರೇಮಿಗಳನ್ನು ಕ್ರಾಂತಿಕಾರಿಗಳಿಗೆ ಕರಿನೀರಿನ ಶಿಕ್ಷೆ, ಕಾಲಪಾನಿ ಶಿಕ್ಷೆ, ಸೆರೆವಾಸ ಮುಂತಾದ ಶಿಕ್ಷೆಗಳನ್ನು ನೀಡುತ್ತಿದ್ದರು. ಅವರನ್ನು ವಿಧ ವಿಧವಾಗಿ ಹಿಂಸಿಸಲಾಗುತ್ತಿತ್ತು ಆದರೆ ಅವರೆಂದಿಗೂ ಈ ಶಿಕ್ಷೆಗಳಿಗೆ ಅಂಜಿ ತಾಯಿ ನೆಲದ ಮೇಲಿನ ಭಕ್ತಿಯನ್ನು ಬಿಟ್ಟರೆ, ಸ್ವಾತಂತ್ರ್ಯ ಪಡೆಯುವಲ್ಲಿ ಅನೇಕ ಕಷ್ಟಗಳು

ಎದುರಾದರೂ ಅದೆಲ್ಲವನ್ನು ಮೆಟ್ಟಿ ನಿಲ್ಲಲಿಲ್ಲವೇ. ತಮ್ಮದೇ ನೆಲದ ಬಿಡುಗಡೆಗಾಗಿ ಅನ್ಯಾಯದ ವಿರುದ್ಧ ಹೋರಾಟ ಮಾಡಿದವರನ್ನೆಲ್ಲ ಆರೋಪಿಗಳೆಂದು ಬ್ರಿಟಿಷರು ಗುರುತಿಸುತ್ತಿದ್ದರು. ತಮ್ಮ ಹಕ್ಕುಗಳ ಬಗ್ಗೆ ಕೇಳುವುದೇ ಅಪರಾಧವೆಂದು ಭಾವಿಸುತ್ತಿದ್ದರು. ಆದರೆ ಅವರ ಹೋರಾಟಗಳು ಇಂದು ಚರಿತ್ರೆಯ ಪುಟದಲ್ಲಿ ಅಜರಾಮರವಾಯಿತು. ಅವರಿಗೆ ಕಳಂಕದ ಛಾಯೆ ತಟ್ಟಲಿಲ್ಲ. ನಮ್ಮ ಮೇಲೆ ಅನೇಕ ಪರಕೀಯರ ದಾಳಿಗಳು ಉಂಟಾದವು ; ಧರ್ಮ ಸಂಸ್ಕೃತಿ ಆಚರಣೆ ಸಂಪ್ರದಾಯ ನಾಗರಿಕತೆ ಸಂಪತ್ತು ಮುಂತಾದ ವಿಷಯಗಳಲ್ಲಿ ನಮ್ಮನ್ನು ಪರಿಪರಿಯಾಗಿ ಶೋಷಿಸಿದರೂ ಕೂಡ ಅದ್ಯಾವುದಕ್ಕೂ ಜಗ್ಗದೆ ಕುಗ್ಗದೆ ನಾವಿಂದು ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆದು ನಿಂತಿದ್ದೇವೆ.

ನಮ್ಮನ್ನು ರಾಜಕೀಯವಾಗಿ ಧಾರ್ಮಿಕವಾಗಿ ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಪರಿಪರಿಯಾಗಿ ಶೋಷಿಸಿದರು ಕೂಡ ನಾವಿಂದು ಮುಂದುವರಿಯುತ್ತಾ ಸಾಗಿದ್ದೇವೆ. ಅಂತಹ ಶಕ್ತಿ, ಯುಕ್ತಿ, ಸನಾತನತೆ, ಸತ್ವಸಾರ ನಮ್ಮಲ್ಲಿದೆ ಎಂದು ಅರ್ಥವಲ್ಲವೇ? ಆದರೂ ನಮ್ಮ ಪುರಾತನ ನಾಗರಿಕತೆ, ಭವ್ಯಇತಿಹಾಸ, ಸನಾತನ ಧರ್ಮಗಳಲ್ಲಿಯೂ ಸಹ ಅನೇಕ ಲೋಪ ದೋಷಗಳು, ಕಂದಾಚಾರ, ಅನಾಚಾರ, ಮೋಸ, ದ್ವೇಷ, ಅಸೂಹೆ, ಕ್ರೌರ್ಯ, ಜಾತಿವ್ಯವಸ್ಥೆ, ವರ್ಣವ್ಯವಸ್ಥೆ, ವರ್ಗವ್ಯವಸ್ಥೆ, ಎಲ್ಲವೂ ಇದ್ದವು ಆದರೆ ನಮ್ಮಲ್ಲಿನ ಆದರ್ಶ ವ್ಯಕ್ತಿಗಳು, ತತ್ವಜ್ಞಾನಿಗಳಾದ ಇನ್ನಿತರ ಮಹಾನುಭಾವರಿಂದ ಹಾಗೂ ವಚನಕ್ರಾಂತಿಯಂತಹ ಅರಿವಿನ ಕ್ರಾಂತಿಯ ಮೂಲಕ ಅವುಗಳ ನಿರ್ಮೂಲನೆ ಮಾಡಲಿಲ್ಲವೇ. ತಪ್ಪು ನಡೆದಾಗ ಒಪ್ಪಿಕೊಳ್ಳಲು ಸಂಕೋಚ ಪಡಬಾರದು. ಇಲ್ಲಿ ಚೆನ್ನಮಲ್ಲಿಕಾರ್ಜುನನೆಂದರೆ ಪಾರದರ್ಶಕತೆ, ಆತ್ಮಸಾಕ್ಷಿ ಅಥವಾ ಜ್ಞಾನವೆನ್ನಬಹುದಾಗಿದೆ.

***"ಹಣ್ಣು ತಿಂದ ಬಳಿಕ ಆ ಮರವನಾರು ತರಿದರೇನು***
***ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿದರೇನು***
***ಮಣ್ಣು ಬಿಟ್ಟ ಬಳಿಕ ಆ ನೆಲವನಾರು ಹುತ್ತರೇನು***
***ಚೆನ್ನಮಲ್ಲಿಕಾರ್ಜುನನರಿಯದ ಆ ಕಾಯವ ನಾಯಿ ತಿಂದರೆನು ನೀರು ಕುಡಿದರೇನು"*** [8]

ಸ್ವಾಭಿಮಾನದಿಂದ, ಛಲದಿಂದ, ಕರುಣೆಯಿಂದ, ದಯೆಯಿಂದ, ಇನ್ನೊಬ್ಬರಿಗೆ ಕೇಡು ಬಯಸದ ವ್ಯಕ್ತಿಗಳಾಗಿ ನಾವು ಬಾಳುವೆಯನ್ನು ಮಾಡಬೇಕು. ನಮ್ಮ ಸಂಸ್ಕೃತಿ ಧರ್ಮ ಆಚಾರ ವಿಚಾರಗಳು ಎಂದಿಗೂ ಮಾನವೀಯತೆಯಿಂದ ಕೂಡಿರಬೇಕು ದಯೆ ಇಲ್ಲದ ಧರ್ಮ, ಪ್ರಜಾವಾತ್ಸಲ್ಯವಿಲ್ಲದ ರಾಜ ಎರಡರಿಂದಲೂ ಏನು ಪ್ರಯೋಜನವಿರುವುದಿಲ್ಲ. ನಿಷ್ಪ್ರಯೋಜಕವಾದ ಆಚರಣೆಗಳಿಂದ ಆಗುವ ಫಲವೇನು ಇಲ್ಲ. ನಾವು ಎಂದು ದೇಶಾಭಿಮಾನ ಬಿಡುತ್ತೇವೆಯೋ, ಅಂದಿಗೆ ನಮ್ಮ ಅವನತಿಯು ಆರಂಭವಾಗುತ್ತದೆ. ದೇಶಾಭಿಮಾನವಿಲ್ಲದವರಿಂದ ಯಾವುದೇ ಪ್ರಯೋಜನವಿಲ್ಲ ದಾಸ್ಯವನ್ನು ವಿರೋಧಿಸುವ ಬದಲು ಅದನ್ನು ಒಗ್ಗೂಡಿಸಿಕೊಂಡರೆ ಇನ್ನಾರು ನಮ್ಮನ್ನು ಆಳಿದರೇನು. ತಾಯಿ ನೆಲದ ಅಭಿಮಾನವನ್ನು ತೊರೆದಾಗ ಈ ನೆಲವು ಯಾರ ವಶವಾದರೇನು. ಹೀಗೆ ಒಳಿತಾದುದ್ದನ್ನೆಲ್ಲ ಬಿಟ್ಟು ಸ್ವಾರ್ಥದಿಂದ ಕೂಡಿದ ವ್ಯಕ್ತಿಗಳು ಅಥವಾ ಪ್ರಜಾ ಸಮುದಾಯವು ಇದ್ದರೂ ಸತ್ತಂತೆ ಎಂದು ತಿಳಿಯಬೇಕು ಮಲ್ಲಿಕಾರ್ಜುನನಿಲ್ಲಿ ಸ್ವಾಭಿಮಾನ ದೇಶಭಕ್ತಿ ಧರ್ಮದ ಸಂಕೇತವಾಗಿ ಗುರುತಿಸಬಹುದು

***"ಹಿಂಡಿನಗಲಿ ಹಿಂಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆ ನಿಮ್ಮ***
***ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ***
***ನೆನೆವೇ ನಿಮ್ಮ ಕಂದ ನೀನ್ ಇತ್ತ ಬಾ ಎಂದು***
***ನೀವು ನಿಮ್ಮಿಂದವ ತೋರ ಚೆನ್ನ ಮಲ್ಲಿಕಾರ್ಜುನ."*** [9]

ನಾವು ಎಲ್ಲೇ ಹೋದರು, ಎಲ್ಲಿಯೇ ನೆಲೆಸಿದರು ಸಹ ನಮ್ಮ ನಾಡು, ನುಡಿ, ಸಂಸ್ಕೃತಿ ಎಂಬುದು

ಪ್ರಮುಖವಾದದು ಬೇರೆ ಬೇರೆ ಭಾಷೆ ಕಲಿಯುವುದು ಪರದೇಶಕ್ಕೆ ಹೋಗುವುದು ಬೇರೆಯ ಸಂಸ್ಕೃತಿಯ ಆಚಾರ ವಿಚಾರಗಳನ್ನು ಗೌರವದಿಂದ ಕಾಣುವುದು ಹಾಗೂ ಪರರ್ಧರ್ಮದ ಬಗ್ಗೆ ಸಹಿಷ್ಣತೆ ಇರುವುದು ಇದ್ಯಾವುದೂ ತಪ್ಪಲ್ಲ ಆದರೆ ದೇಶಭಕ್ತಿ ಅಥವಾ ರಾಷ್ಟ್ರೀಯತೆಯು ಕುಂಜರ ನೆನೆವಂತೆ ತಾಯಿ ನೆಲಕ್ಕಾಗಿ ಮಿಡಿಯಬೇಕು ಗಿಳಿಯಂತೆ ಸ್ವಜನ ಪ್ರೇಮವನ್ನು ಬೆಳೆಸಿಕೊಳ್ಳಬೇಕು ತಾಯಿ ಭಾರತಾಂಬೆಯ ಮೇಲೆ ಅಪಾರ ಭಕ್ತಿಯನ್ನು ಹೊಂದಿ ಅವಳ ಏಳಿಗೆಗಾಗಿ ದುಡಿಯುವ ಮನಸ್ಸು ಇರಬೇಕು ಎಂಬುದಾಗಿ ಇಲ್ಲಿನ *ಆಶಯವನ್ನು ವಿಶ್ಲೇಷಿಸಬಹುದು. ಚೆನ್ನಮಲ್ಲಿಕಾರ್ಜುನನಿಲ್ಲಿ ಭಾರತಾಂಬೆಯ ಪ್ರತೀಕವಾಗಿದ್ದಾನೆ.*

> ***"ಎನ್ನ ಮನದ ಜಗವೆಂತು ತಿಳಿಯುವುದು***
> ***ಬಂಜೆ ಬೇನೆಯನರಿಯಳು ಮಲತಾಯಿ ಮುದ್ದು ಬಲ್ಲಳೇ***
> ***ನೊಂದವರ ನೋವ ನೋಯದವರೆತ್ತಬಲ್ಲರು ಚೆನ್ನಮಲ್ಲಿಕಾರ್ಜುನ"*** [10]

ಅಸಮಾನತೆಯಿಂದ ವರ್ಗ ವ್ಯವಸ್ಥೆಯಿಂದ, ವರ್ಣ ವ್ಯವಸ್ಥೆಯಿಂದ, ಬ್ರಿಟಿಷರ ಅತಿಯಾದ ಶೋಷಣೆಯಿಂದ, ಸಾಮಾನ್ಯರ ಹೆಣ್ಣು ಮಕ್ಕಳ ಮೇಲೆ ನಡೆದ ದೌರ್ಜನ್ಯದಿಂದಾಗಿ ಭಾರತೀಯ ಸಾಮಾನ್ಯ ವರ್ಗವು ಅನುಭವಿಸಿದ ನೋವನ್ನು ಪರಕೀಯರ ಸ್ನೇಹ ಬಯಸಿದವರು ರಾಜರು, ಜಮೀನ್ದಾರರು, ಶ್ರೀಮಂತ ವರ್ಗ, ವ್ಯಾಪಾರಿಗಳು ಮುಂತಾದವರಿಗೆ ಅವರ ಬವಣೆಗಳು ಹೇಗೆ ಅರಿವಾಗುತ್ತವೆ ನೊಂದವರ ನೋವನ್ನು ನೋಯದವರು ಹೇಗೆ ತಿಳಿಯಲು ಸಾಧ್ಯ ತಮ್ಮ ಒಳಿತಿಗಾಗಿ ಅನೇಕ ರೂಢಿ ಸಂಪ್ರದಾಯಗಳನ್ನು ಮಾಡಿಕೊಂಡು ಸಾಮಾನ್ಯರನ್ನು ಶೋಷಿಸಿ ಅವರನ್ನು ಗಾಣದ ಎತ್ತಿನಂತೆ ದುಡಿಸಿಕೊಳ್ಳುವವರಿಗೆ ಅವರ ಮನದ ಬೇಣೆ ತುಮುಲಗಳ ಅರಿವು ಉಂಟಾಗಲು ಹೇಗೆ ಸಾಧ್ಯವಾದೀತು ಹೇಗೆ ಎಂಬುದಾಗಿ ವಚನದ ಆಶಯವನ್ನು ವಸಹಾತುಶಾಹಿ ಕಾಲಘಟ್ಟಕ್ಕೆ ಅನ್ವಯಿಸಿ ಗುರುತಿಸಬಹುದಾಗಿದೆ.

ಈ ಲೇಖನದಲ್ಲಿ ಆಯ್ದುಕೊಂಡಿರುವ ವಚನಗಳಲ್ಲಿ ನಾವು ಒಂದು ಮುಖದಲ್ಲಿ ಗಮನಿಸುವುದಾದರೆ ಅವು ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನ ಮೇಲಿಟ್ಟಿರುವ ಅಪಾರ ಭಕ್ತಿಯು ಗೋಚರಿಸುತ್ತದೆ; ಆಧ್ಯಾತ್ಮಿಕತೆಯ ತುತ್ತ ತುದಿಗೆ ಏರಲು ಆಕೆಯು ಅನುಭವಿಸಿದ ಅಡೆತಡೆಗಳ ಬಗೆಗೆ ಕೊಂಚ ಮಾಹಿತಿಯು ತಿಳಿಯುತ್ತದೆ. ಭಕ್ತಿ ಮಾರ್ಗವನ್ನು ಆಯ್ದುಕೊಂಡ ವಚನಕಾರರಿಗೆ ಎದುರಾದಂತಹ ಸಂಕಷ್ಟಗಳು ಹಾಗೂ ಸಮಾಜದ ಕಟ್ಟುಪಾಡುಗಳನ್ನು ಮೀರಿ ಹೊಸದನ್ನು ಹುಡುಕುತ್ತಾ ಹೊರಟ ಶರಣರಿಗೆ ಬಂದಂತಹ ಸವಾಲುಗಳು, ಅವರು ಅವುಗಳನ್ನು ಎದುರಿಸಲು ಪಡುವ ಯಾತನೆಯ ಬಗೆಗೆ ಮಾಹಿತಿ ನೀಡುತ್ತದೆ. ಆದರೆ ಅವರ ಅಚಲಭಕ್ತಿಯು ಅವರನ್ನು ಯಾವುದೇ ಸಮಸ್ಯೆಯಿಂದ ಪಾರು ಮಾಡುವ ಅಂಶವಾಗಿತ್ತು ಎಂಬುದನ್ನು ನಾವಿಲ್ಲಿ ಅರಿಯಬೇಕು.

ಆದರೆ ಅದನ್ನು ವಸಹಾತುಶಾಹಿಯ ಕಾಲಘಟ್ಟಕ್ಕೆ ಅನ್ವಯಿಸಿ ನೋಡಿದಾಗ ಶರಣರ ಅಚಲವಾದ ಭಕ್ತಿಯು ದೇಶಪ್ರೇಮಿಗಳ ದೇಶಭಕ್ತಿ ಇಷ್ಟೇ ಅಚಲವಾಗಿರಬೇಕಿತ್ತು ಶರಣರ ದೃಢತೆಯು ಅವರಿಗೆ ಅವಶ್ಯಕತೆಯಾಗಿತ್ತು. ಅವರು ತಮ್ಮವರು ಮತ್ತು ಪರಕೀಯರು ಇಬ್ಬರ ಜೊತೆಯು ಹೋರಾಟವನ್ನು ಮಾಡಬೇಕಿತ್ತು. ತಮ್ಮವರಿಗೆ ತಾಯಿ ನೆಲದ ಮಹತ್ವದ ಬಗೆಗಿನ ಜಾಗೃತಿಯನ್ನು ಮೂಡಿಸುವಲ್ಲಿ ಅವರು ಹಲವಾರು ಬೇಗೆಯಲ್ಲಿ ಬೇಯ ಬೇಕಾಗಿತ್ತು. ಪರದೇಶಿಯರ ರಾಜಕುತಂತ್ರಕ್ಕೆ ಅವರ ನಡೆ–ನುಡಿ ದೈರ್ಯ, ಸಾಹಸ, ಪರಿಪೂರ್ಣ ವ್ಯಕ್ತಿತ್ವದಿಂದ ತಂತ್ರಕ್ಕೆ ಪ್ರತಿತಂತ್ರವನ್ನು ಹೆಣೆದು ಅವರನ್ನು ಸೋಲಿಸಿ ಚೆನ್ನಮಲ್ಲಿಕಾರ್ಜುನ ಅರ್ಥ ಸ್ವಾತಂತ್ರ್ಯ ಸಮಾನತೆ ಐಕ್ಯತೆಯನ್ನು ಸ್ಥಾಪಿಸಲು ಅವರು ತಮ್ಮ ತನುಮನವನೆಲ್ಲ ಅರ್ಪಿಸಿ ಉತ್ತಮ ಆದರ್ಶಗಳನ್ನು ಕೈಯಲ್ಲಿ ಹಿಡಿದು, ಎದುರಾಗುವ ಸವಾಲುಗಳಿಗೆ

ಅಂಜದೆ ಕುಗ್ಗದೆ ಜಗ್ಗದೆ ಸಾಗಬೇಕಾಗಿತ್ತು ಈ ಅಂಶಗಳನ್ನು ಪರೋಕ್ಷವಾಗಿ ಅಕ್ಕಮಹಾದೇವಿಯ ವಚನಗಳಲ್ಲಿ ನಾವು ಗುರುತಿಸಬಹುದಾಗಿದೆ ಹಾಗಾಗಿ ಆ ದೃಷ್ಟಿಕೋನವನ್ನು ಇಟ್ಟುಕೊಂಡು ರಾಷ್ಟ್ರೀಯತೆಯ ಅಂಶಗಳನ್ನು ಶರಣ ತತ್ವಗಳ ಅಡಿಯಲ್ಲಿ ಚರ್ಚಿಸಲಾಗಿದೆ.

**ಕೊನೆಟಿಪ್ಪಣಿ**

1. ಚಿದಾನಂದಮೂರ್ತಿ. (2013). *ವಚನ ಸಾಹಿತ್ಯ*. ಪು. 68
2. *ಅದೇ.* ಪು.69
3. ಪುಟ್ಟಸ್ವಾಮಯ್ಯ, ಬಿ. (2019). *ಮೂರು ನಾಟಕಗಳು.* ಪು.ಸ 831
4. *ಅದೇ.* ಪು. 837
5. *ಅದೇ.* ಪು. 865
6. *ಅದೇ.* ಪು. 865
7. *ಅದೇ.* ಪು. 866
8. *ಅದೇ.* ಪು. 885
9. *ಅದೇ.* ಪು. 891
10. *ಅದೇ.* ಪು. 891

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ್, ಎಚ್.ಕೆ. (2021). *ಭಾರದ ಬೃಹತ್ ಬೇಲಿ.* ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ,
- ಚಿದಾನಂದಮೂರ್ತಿ. (2013). *ವಚನ ಸಾಹಿತ್ಯ.* ಸಪ್ನ ಬುಕ್ ಹೌಸ್
- ಮರುಳಸಿದ್ದಪ್ಪ, ಕೆ. (2013). *ಆಧುನಿಕ ಕನ್ನಡ ನಾಟಕಗಳು.* ಅಂಕಿತ ಪ್ರಕಾಶನ
- ನಗರ್ಲೆ ಶಿವಕುಮಾರ. (2018). *ಜಗನ್ಮಾತೆ ಅಕ್ಕಮಹಾದೇವಿ.* ಶರಣು ವಿಶ್ವವಚನ ಪೌಂಡೇಶನ್.
- ಪುಟ್ಟಸ್ವಾಮಯ್ಯ, ಬಿ. (2019). *ಬಿ. ಪುಟ್ಟಸ್ವಾಮಯ್ಯನವರ ಸಮಗ್ರ ನಾಟಕಗಳು.* ಪ್ರಿಯದರ್ಶಿನಿ
- ರಂಗನಾಥ್, ಹೆಚ್.ಕೆ. (2014). *ಕರ್ನಾಟಕ ರಂಗಭೂಮಿ.* ಹೇಮಂತ ಸಾಹಿತ್ಯ
- ರಾಮಸ್ವಾಮಿ, ಎ.ಆರ್. (2011). *ಸ್ವಾತಂತ್ರ್ಯೋದಯದ ಮೈಲಿಗಲ್ಲಗಳು.* ರಾಷ್ಟ್ರೋತ್ಥಾನ ಮುದ್ರಣಾಲಯ
- ಸದಾಶಿವ, ಕೆ. (2019). *ಭಾರತದ ಸ್ವಾತಂತ್ರ್ಯ ಹೋರಾಟ.* ಪ್ರಿಯದರ್ಶಿನಿ ಪ್ರಕಾಶನ.
- ಶಂಕರನಾರಣರಾವ್, ಎನ್. ಪಿ. (2015). *ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು.* ನವಕರ್ನಾಟಕ ಪಬ್ಲಿಕೇಶನ್ಸ್
- ವೇದಾ, ಎಂ.ಎಸ್. (2013). *ಬಿ. ಪುಟ್ಟಸ್ವಾಮಯ್ಯನವರ ನಾಟಕಗಳ ಅಧ್ಯಯನ.* ಸಂವಹನ ಪ್ರಕಾಶನ
- Field Noose, D.K. (1981). *Colonialism 1870 – 1945.* The Macmillan Press Hobsbawm E. J.(2000). *Nation And Nationalism.* Cambridge university press
- Rabindranath Tagore. (2010). *Nationalism*. Penguin Books